## ಹಿತ್ತಾಳೆಯ ಹೂವಿನಬುಟ್ಟಿ

ಬಿದಿರಿನ ಬುಟ್ಟಿಯಂತೆ ಕಂಗೊಳಿಸುತ್ತಿರುವ ಈ ಬುಟ್ಟಿ ಹಿತ್ತಾಳೆಯದು. ಮೂರು ತಲೆಮಾರನ್ನು ಕಂಡಿರುವ ಇದು ಹರಿಹರದ ಸಾಹಿತಿ ಲಲಿತಮ್ಮ ಡಾ.ಚಂದ್ರಶೇಖರ್ ಅವರ ಮನೆಯಲ್ಲಿದೆ. ಪ್ರತಿ ವರ್ಷ ದಸರಾದಲ್ಲಿ ಫಳಫಳಗೊಂಡು ಬೊಂಬೆ ಪ್ರದರ್ಶನದೊಂದಿಗೆ ಕಂಗೊಳಿಸುತ್ತದೆ. ಇದರ ಅಂಚು, ಕೊಂಡಿ, ಹಿಡಿ, ಹೆಣಿಗೆ ಎಲ್ಲವೂ ಅದ್ಭುತವಾಗಿವೆ.

**-ಸೀತಾ ಎಸ್. ನಾರಾಯಣ**
**ಹರಿಹರ**





## ಮಡೆ ಉತ್ಸವ

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದಂಡಿನಶಿವರದ ಗ್ರಾಮ ದೇವತೆ ಹೊನ್ನಾದೇವಿಯ ಜಾತ್ರೆಯ ಮೊದಲ ದಿನ ರಾತ್ರಿ ಮಡೆ ಉತ್ಸವ ನೋಡಬಹುದು. ಯುಗಾದಿ ಮುಗಿದ ಒಂದು ತಿಂಗಳಿಗೆ ಇಲ್ಲಿ ಈ ಆಚರಣೆ ನಡೆಯುತ್ತದೆ. ಅಂದು ದೇವಿಗೆ ಅರ್ಪಿಸಲು ಮಡೆ ಅನ್ನವಿರುವ ಗಡಿಗೆಗಳನ್ನು ಭಕ್ತರು ತಮ್ಮ ತಲೆಯ ಮೇಲೆ ಹೊತ್ತು ಮೆರವಣಿಗೆಯಲ್ಲಿ ಸಾಗುವುದನ್ನು ಸ್ಥಳೀಯರು 'ಮಡೆ ಉತ್ಸವ' ಎಂದು ಕರೆಯುತ್ತಾರೆ. ಮಹಿಳೆಯರೊಂದಿಗೆ ಗಂಡಸರೂ ಸಹ ಮಡೆ ಗಡಿಗೆಗಳನ್ನು ಹೊರುವುದು ಇಲ್ಲಿನ ವಿಶೇಷ.

ಮುನ್ನೂರು ಹೊಸ ಗಡಿಗೆಗಳನ್ನು ಒಲೆಯ ಮೇಲೆ ಒಂದರ ಮೇಲೊಂದರಂತೆ ವೈವಿಧ್ಯ ರೀತಿಯಲ್ಲಿ ಜೋಡಿಸಿ ದೇವಿಯ ಭೋಜನಕ್ಕೆ ಮಡೆ ಅನ್ನವನ್ನು ಬೇಯಿಸಲಾಗುತ್ತದೆ. ಈ ಗಡಿಗೆಗಳನ್ನು ಹರಕೆ ಹೊತ್ತ ಭಕ್ತರು ಮಡಿಬಟ್ಟೆಯ ಮೇಲೆ ನಡೆದು ಸಾಗುತ್ತಾರೆ. ಇದನ್ನು 'ನಡೆ ಮಡಿ' ಎನ್ನಲಾಗುತ್ತದೆ. ಸಾಮಾನ್ಯವಾಗಿ ಈ ಭಾಗದ ಒಕ್ಕಲಿಗ ಜಾತಿಯ ನವ ವಧು–ವರರು ಮಡೆ ಹೊರುವ ಸಂಪ್ರದಾಯವಿದೆ.

**-ದಂಡಿನಶಿವರ ಮಂಜುನಾಥ, ಬೆಂಗಳೂರು**

## ಬೆಲ್ಲದ ಜಿಲೇಬಿ

ಸಿಹಿ ಖಾದ್ಯಗಳಾದ ಬೆಳಗಾವಿ ಕುಂದಾ, ಧಾರವಾಡ ಪೇಡಾ, ಗೋಕಾಕ ಕರದಂಟು ಹೇಗೆ ಪ್ರಸಿದ್ಧಿಯೋ ಹಾಗೆ ಕೊಪ್ಪಳದಲ್ಲಿ ಬೆಲ್ಲದ ಜಿಲೇಬಿ ಖ್ಯಾತಿ ಪಡೆದಿದೆ. ಜಿಲೇಬಿಯನ್ನು ಸಾಮಾನ್ಯವಾಗಿ ಸಕ್ಕರೆ ಪಾಕದಲ್ಲಿ ಹಾಕಿ ಮಾಡುತ್ತಾರೆ. ಆದರೆ ಕೊಪ್ಪಳದ ಗಡಿಯಾರ ಕಂಬದ ಬಳಿ ಇರುವ ಮಟ್ಟಿ ಅವರ ಅಂಗಡಿಯ ಬೆಲ್ಲದ ಜಿಲೇಬಿ ಅನೇಕ ವರ್ಷಗಳಿಂದ ಹೆಸರುವಾಸಿಯಾಗಿದೆ.

**-ನಾಗರಾಜ ನಾಯಕ ಡಿ.**
**ಡೊಳ್ಳಿನ, ಕೊಪ್ಪಳ**

